**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 567/2019**

ಸಾಕ್ಷಿಗೆ ದಿನಾಂಕ **19.9.2022** ರಂದು ಪ್ರಮಾಣವಚನ ಬೋಧಿಸಲಾಯಿತು.

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರೇವಣ್ಣ | ಪಿ.ಡಬ್ಲ್ಯೂ-8 |
| ತಂದೆಯ/ಗಂಡನ ಹೆಸರು | : | ಟಿ.ಸಿದ್ದಪ್ಪ | ಸಿ.ಡಬ್ಲ್ಯೂ-16 |
| ವಯಸ್ಸು | : | 50 | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಪುರ | |

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನನಗೆ ಚಾಸ1 ರವರ ಪರಿಚಯವಿರುತ್ತದೆ. 25.10.2017 ರಂದು ಚಾಸ1 ರವರ ಮಗನಿಗೆ ಜ್ವರ ಇದ್ದು ಆತನಿಗೆ ಆರೋಪಿ ಬಳಿ ಚಿಕಿತ್ಸೆ ಕೊಡಿಸಿರುತ್ತಾರೆ. ಆತನಿಗೆ ಜ್ವರ ಕಡಿಮೆಯಾಗದ ಕಾರಣ ಮೂರು ದಿನಗಳು ಸತತವಾಗಿ ಆರೋಪಿ ಬಳಿ ಚಿಕಿತ್ಸೆ ಕೊಡಿಸಿರುತ್ತಾರೆ. ಆರೋಪಿ ಇಂಜಕ್ಷನ್ ನೀಡಿದ ಸ್ಥಳದಲ್ಲಿ ಊತ ಬಂದಿರುತ್ತದೆ. ಅದಕ್ಕೆ ಆರೋಪಿ ಉಪ್ಪಿನ ಶಾಖ ಕೊಡಲು ತಿಳಿಸಿರುತ್ತಾನೆ. ಆದರೆ ಏನು ಪ್ರಯೋಜನ ವಾಗಿರುವುದಿಲ್ಲ. ಆಗ ದಿನಾಂಕ 28.10.217 ರಂದು ಆರೋಪಿ ಬಳಿ ಚಾಸ1 ರವರ ಮಗನನ್ನು ಕರೆದುಕೊಂಡು ಹೋದಾಗ ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಕರೆದುಕೊಂಡು ಹೋಗಲು ತಿಳಿಸಿರುತ್ತಾನೆ. ಚಾಸ1 ರವರು ತನ್ನ ಮಗನನ್ನು ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಮಾಡಿರುತ್ತಾರೆ. ಆದರೆ ಚಿಕಿತ್ಸೆ ಫಲಕಾರಿಯಾಗದೇ ಚಾಸ1 ರವರ ಮಗ ಮೃತಪಟ್ಟಿರುತ್ತಾನೆ. ಚಾಸ1 ರವರ ಮಗನ ಸಾವಿಗೆ ಆರೋಪಿ ಸರಿಯಾಗಿ ಇಂಜಕ್ಷನ್ ನೀಡದೇ ಇರುವುದು ಕಾರಣವಾಗಿರುತ್ತದೆ. ಆರೋಪಿ ಬಳಿ ಚಾಸ1 ಮತ್ತು ನಮ್ಮ ಗ್ರಾಮಸ್ಥರು ಕೇಳಲಾಗಿ ಆತ ತನ್ನಿಂದ ತಪ್ಪಾಗಿರುತ್ತದೆ, ಪರಿಹಾರ ಕೊಡುತ್ತೇನೆ ಎಂದುತಿಳಿಸಿರುತ್ತಾನೆ. ರಾಜಿ ಪಂಚಾಯಿತಿ ಮಾಡಿದಾಗ ಆರೋಪಿ 10 ಲಕ್ಷ ಹಣ ನೀಡುವುದಾಗಿ ಒಪ್ಪಿ ತನ್ನ ಹೆಸರಿನಲ್ಲಿದ್ದ ಮನೆಯನ್ನು ಚಾಸ1 ರವರ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ಆರೋಪಿ 2-3 ತಿಂಗಳು ಕಾಲ ಹಣ ನೀಡುವುದಾಗಿ ಹೇಳಿಕೊಂಡು ಕಾಲಹರಣ ಮಾಡಿ ಹಣವನ್ನು ನೀಡಿರುವುದಿಲ್ಲ. ಆ ಕಾರಣ ಚಾಸ1 ರವರು ಠಾಣೆಗೆ ಹೋಗಿ ದೂರು ದಾಖಲು ಮಾಡಿರುತ್ತಾರೆ. ಪಂಚಾಯಿತಿ ಸಮಯದಲ್ಲಿ ನನ್ನನ್ನು ಹೊರತುಪಡಿಸಿ ಚಾಸ12, 19 ಮತ್ತು ಇತರರು ಹಾಜರಿದ್ದರು. ಆರೋಪಿ ನೋಡಿದರೆ ಗುರುತಿಸುತ್ತೇನೆ, ಈ ದಿನ ನ್ಯಾಯಾಲಯದ ಮುಂದಿರುತ್ತಾರೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ

ನಮ್ಮ ಮತ್ತು ಆರೋಪಿ ಗ್ರಾಮಕ್ಕೆ ಸುಮಾರು 3 ಕಿ.ಮೀ ಅಂತರವಿದೆ ಎಂದರೆ ಸರಿ. ನಾನು ಸುಮಾರು 25 ವರ್ಷದಿಂದ ಕೋಹಳ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆ. ಪೋಲಿಸರ ಮುಂದೆ ನಾನು ನನ್ನ ಹೇಳಿಕೆಯಲ್ಲಿ ಚಾಸ1 ರವರು ತನ್ನ ಮಗನನ್ನು ಆರೋಪಿ ಬಳಿ ಚಿಕಿತ್ಸೆಗೆ ಕರೆದುಕೊಂಡು ಹೋಗಿರುವ ಬಗ್ಗೆ ನನಗೆ ತಿಳಿಸಿರುತ್ತಾರೆ ಎಂದು

ಹೇಳಿರುತ್ತೇನೆ. ಪೋಲಿಸರು ನನ್ನ ಹೇಳಿಕೆಯನ್ನು ಡಿಸೆಂಬರ್ 2017 ರಲ್ಲಿ ಪಡೆದುಕೊಂಡಿರುತ್ತಾರೆ. ಸಾಮಾನ್ಯವಾಗಿ ವೈದ್ಯರ ಬಳಿ ಚಿಕಿತ್ಸೆಗೆ ಹೋದಾಗ ಚೀಟಿಯಲ್ಲಿ ಔಷದಿ ಬರೆಯುವ ವಾಡಿಕೆ ಇರುತ್ತದೆ ಎಂದರೆ ಸರಿ.

ಸಾಮಾನ್ಯವಾಗಿ ಕ್ಲಿನಿಕ್ ನಡೆಸುವವರು ನಾಮಫಲಕ ಹಾಕುವ ವಾಡಿಕೆ ಇರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಆರೋಪಿ ಹಾಕಿರುವುದಿಲ್ಲ ಎನ್ನುವರು. ನನಗೆ ಅನಾರೋಗ್ಯವಿದ್ದಾಗ ಆರೋಪಿ ಬಳಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಆರೋಪಿ ನನಗೆ ಔಷದಿ ಚೀಟಿ ನೀಡುತ್ತಿರಲಿಲ್ಲ, ಆತನೇ ತನ್ನ ಬಳಿ ಇದ್ದ ಮಾತ್ರೆ ನೀಡಿ ಇಂಜಕ್ಷನ್ ಕೊಡುತ್ತಿದ್ದರು. ಪಂಚಾಯಿತಿ ಮಾಡಲು ಸುಮಾರು 30-40 ಜನ ಇದ್ದರು. ಎಲ್ಲ ವ್ಯಕ್ತಿಗಳ ಹೆಸರು ನನಗೆ ಗೊತ್ತಿರುವುದಿಲ್ಲ. ಪಂಚಾಯಿತಿ ತೀರ್ಮಾನದ ಬಗ್ಗೆ ಯಾವುದೇ ಬರವಣಿಗೆ ಆಗಿರುವುದಿಲ್ಲ. ಆರೋಪಿ ಮತ್ತು ಚಾಸ 1 ರವರ ಮಗನ ಸಾವಿಗೆ ಯಾವುದೇ ಸಂಬಂಧ ಇರುವುದಿಲ್ಲ, ಆರೋಪಿಯಿಂದ ಅಕ್ರಮ ಲಾಭ ಪಡೆಯುವ ಸಲುವಾಗಿ ಚಾಸ 1 ರವರು ಸಲ್ಲಿಸಿದ ಸುಳ್ಳು ದೂರಿನ ಪೂರಕವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ